# ರಾಮಕೃಷ್ಣ ಮಿಷನ್ ಆಡಳಿತ ಮಂಡಳಿಯ ವಾರ್ಷಿಕ ವರದಿಯ ಸಾರಾಂಶ – 2019-2020

**ರಾ**ಮಕೃಷ್ಣ ಮಿಷನ್ನಿನ ೧೧೧ನೇ ವಾರ್ಷಿಕ ಸಭೆಯು ೨೦೨೧ರ ಮಾರ್ಚ್ ೭ರ ಭಾನುವಾರ ಮಧ್ಯಾಹ್ನ ೩.೩೦ಕ್ಕೆ ಬೇಲೂರು ಮಠದಲ್ಲಿ ನಡೆಯಿತು. ಸಭೆಯಲ್ಲಿ ಮಂಡಿಸಲಾದ ವರದಿಯ ಸಾರಾಂಶವನ್ನು ಈ ಕೆಳಗೆ ನೀಡಲಾಗಿದೆ.

ರಾಮಕೃಷ್ಣ ಮಿಷನ್ನಿಗೆ ಈ ಕೆಳಗಿನ ಪ್ರಶಸ್ತಿಗಳು ಲಭಿಸಿವೆ: 1) ವಿಶ್ವವಿದ್ಯಾಲಯ ಅನುದಾನ ಆಯೋಗ (UGC): ೧) **RKMVERI** (ಸ್ವಾಯತ್ತ ವಿಶ್ವವಿದ್ಯಾಲಯ), (**ಕೊಯಮತ್ತೂರು** ಮಿಷನ್ ವಿದ್ಯಾಲಯದ) ಕಾಲೇಜ್ ಆಫ್ ಎಜುಕೇಶನ್, (ಹೌರಾದ ಬೇಲೂರಿನಲ್ಲಿರುವ **ಶಾರದಾಪೀಠ** ಕೇಂದ್ರದ)ಶಿಕ್ಷಣ ಮಂದಿರ–ಈ ಸಂಸ್ಥೆಗಳನ್ನು ಇತರ ಉನ್ನತ ಶಿಕ್ಷಣ ಸಂಸ್ಥೆಗಳ ಗುಣಮಟ್ಟ ವೃದ್ಧಿಸುವ ಹಾಗೂ NAAC ಅಂಗೀತಕೃತವಾಗಲು ಸಹಾಯ ಮಾಡುವ ಸಲುವಾಗಿ '**ಶಿಕ್ಷಕ ಸಂಸ್ಥೆಗಳು**' ಎಂಬುದಾಗಿ ಪರಿಗಣಿಸಿ ಆಯ್ಕೆ ಮಾಡಿದೆ. ೨) **ಚೆನ್ನೈ ವಿದ್ಯಾಪೀಠ**ದ ವಿವೇಕಾನಂದ ಕಾಲೇಜಿನ ಸ್ವಾಯತ್ತತೆಯನ್ನು 10 ವರ್ಷಗಳವರೆಗೆ ಮುಂದುವರೆಸಿದೆ. 2) ಭಾರತ ಸರ್ಕಾರದ ವಿಜ್ಞಾನ ತಂತ್ರಜ್ಞಾನ ಸಚಿವಾಲಯ (**MST**)ದ ವೈಜ್ಞಾನಿಕ ಹಾಗೂ ಕೈಗಾರಿಕ ಸಂಶೋಧನಾ ವಿಭಾಗವು (**DSIR**) ಕೋಲ್ಕತ್ತದ **ರಹರಾ** ಕೇಂದ್ರದ ವಿವೇಕಾನಂದ ಸೆಂಟಿನರಿ ಕಾಲೇಜನ್ನು ವೈಜ್ಞಾನಿಕ ಹಾಗೂ ಕೈಗಾರಿಕ ಸಂಶೋಧನ ಸಂಸ್ಥೆ (SIRO) ಎಂಬುದಾಗಿ ಪರಿಗಣಿಸಿದೆ.

ರಾಮಕೃಷ್ಣ ಮಿಷನ್ನಿನ ಹೊಸ ಶಾಖಾಕೇಂದ್ರಗಳು: 1) **ಕಸುಂಡಿಯಾ**–ಪಶ್ಚಿಮ ಬಂಗಾಳದ ಹೌರಾದಲ್ಲಿ 2) ಒಡಿಶಾದ **ರೋರ್ಕೇಲಾ**ದಲ್ಲಿ 3) ತಮಿಳುನಾಡಿನ **ವಿಲ್ಲುಪುರಂ**ನಲ್ಲಿ. ರಾಮಕೃಷ್ಣ ಮಠದ ಒಂದು ಕೇಂದ್ರವು ಬಿಹಾರದ ಪೂರ್ನಿಯಾದಲ್ಲಿ ಆರಂಭವಾಯಿತು. ರಾಮಕೃಷ್ಣ ಮಠದ ಉಪ–ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ಯಾಮಪುಕುರ ಬಾಟಿ ಕೇಂದ್ರವು '**ಕಥಾಮೃತ ಭವನ**' ಎಂಬುದಾಗಿ ಪ್ರತ್ಯೇಕ ಶಾಖಾ ಕೇಂದ್ರವಾಗಿ ಪರಿಗಣಿತವಾಗಿದೆ. ಸ್ವಾಮಿ ತ್ರಿಗುಣಾತೀತಾನಂದರ ಸ್ಮಾರಕ ಭವನ ರಾಮಕೃಷ್ಣ ಮಠದ ಕೈಗೆ ಬಂದಿದ್ದು, **ಸ್ವಾಮಿ ತ್ರಿಗುಣಾತೀತಾನಂದ ಸ್ಮಾರಕ**ವೆಂದು ಮರುನಾಮಕರಣಗೊಂಡಿದೆ. ಮನಿಲಾದಲ್ಲಿರುವ **ಫಿಲಿಪ್ಪೈನ್ಸ್** ವೇದಾಂತ ಸೊಸೈಟಿಯು ರಾಮಕೃಷ್ಣ ಮಿಷನ್ನಿಗೆ ಸೇರ್ಪಡೆಗೊಂಡಿದೆ. ಕೆನಡಾದ **ವ್ಯಾಂಕೋವರ್**ನಲ್ಲಿರುವ ಹಾಗೂ ಬ್ರೆಜಿಲ್‌ನಲ್ಲಿರುವ **ಕ್ಯುರಿಟಿಬಾ** ವೇದಾಂತ ಕೇಂದ್ರಗಳು ರಾಮಕೃಷ್ಣ ಮಠಕ್ಕೆ ಸೇರ್ಪಡೆಗೊಂಡಿವೆ. ಅಮೆರಿಕದ **ಪಿನಾನ್‌ಹಿಲ್ಸ್**ನಲ್ಲಿರುವ ಕುಟೀರವನ್ನು ಹಾಲಿವುಡ್ ವೇದಾಂತ ಸೊಸೈಟಿಯ ಉಪಕೇಂದ್ರವನ್ನಾಗಿ ಮಾಡಲಾಗಿದೆ.

ಶೈಕ್ಷಣಿಕ ಕ್ಷೇತ್ರದಲ್ಲಿ, ಈ ಕೆಳಗಿನ **ಹೊಸ ಬೆಳವಣಿಗೆಗಳು** ಉಲ್ಲೇಖಾರ್ಹ: ೧) **ಚೆನ್ನೈ ಸ್ಟೂಡೆಂಟ್ಸ್ ಹೋಂ** ಮೆಕ್ಯಾನಿಕಲ್, ಆಟೋಮೊಬೈಲ್ ಹಾಗೂ ಕಂಪ್ಯೂಟರ್ ಇಂಜಿನಿಯರಿಂಗ್ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಕೌಶಲ್ಯಾಭಿವೃದ್ಧಿ ಕೇಂದ್ರವನ್ನು ಆರಂಭಿಸಿದೆ. ೨) **ಕೊಯಮತ್ತೂರು ವಿದ್ಯಾಲಯ**ವು ತನ್ನ ಕಲೆ ಮತ್ತು ವಿಜ್ಞಾನ ಕಾಲೇಜಿನಲ್ಲಿ ಕೈಗಾರಿಕಾ ಕಾರ್ಯನಿರ್ವಹಣಾ ಪರಿಸರವನ್ನು ನಿರ್ಮಿಸಲು ಒಂದು ಪ್ರೇರಣಾ ಕೇಂದ್ರವನ್ನು ಆರಂಭಿಸಿದೆ. ೩) ಜಾರ್ಖಂಡ್ ಸರ್ಕಾರವು **ರಾಂಚಿ ಮೊರಬಾದಿ** ಕೇಂದ್ರಕ್ಕೆ ಅಲ್ಪಸಂಖ್ಯಾತರ ರಾಷ್ಟ್ರೀಯ ಮುಕ್ತಶಾಲೆ (NIOS)ಯ ಆಶ್ರಯದಲ್ಲಿ 'ಮೌಲ್ಯಾಧಾರಿತ ಬಹುಕೌಶಲ್ಯವರ್ಧನಾ ತರಬೇತಿ ಕೇಂದ್ರ'ವನ್ನು ಆರಂಭಿಸಲು ಹೆಸರಿಸಿದೆ.

ವೈದ್ಯಕೀಯ ಕ್ಷೇತ್ರದಲ್ಲಿ ಈ ಕೆಳಗಿನ **ಹೊಸ ಬೆಳವಣಿಗೆಗಳು** ಉಲ್ಲೇಖಾರ್ಹ: ೧) **ಕಂಖಲ್** ಕೇಂದ್ರವು ಒಂದು ಶಸ್ತ್ರಚಿಕಿತ್ಸಾ ಸಂಕೀರ್ಣ, ಸರ್ಜಿಕಲ್‌ವಾರ್ಡ್, ಡಯಾಲಿಸಿಸ್ ಯೂನಿಟ್ ಹಾಗು ಸಿಟಿ ಸ್ಕ್ಯಾನ್ ಸೌಲಭ್ಯವನ್ನು ಆರಂಭಿಸಿದೆ. 2) **ಮಾನಸದ್ವೀಪ** ಕೇಂದ್ರವು ಒಂದು ಹೊಸ ಡಿಸ್ಪೆನ್ಸರಿ ಕಟ್ಟಡವನ್ನು ಆರಂಭಿಸಿದೆ. ೩) **ವೃಂದಾವನ** ಕೇಂದ್ರವು ತನ್ನ ಆಸ್ಪತ್ರೆಯಲ್ಲಿ ಶಾರದಾ ಬ್ಲಾಕನ್ನು ಆರಂಭಿಸಿದೆ. ಇದನ್ನು NABH ದರ್ಜೆಗೆ ಅನುಗುಣವಾಗಿ ನಿರ್ಮಿಸಲಾಗಿದೆ. ಇದರಲ್ಲಿ ಎರಡು ಮೊಡ್ಯುಲರ್ ಶಸ್ತ್ರಚಿಕಿತ್ಸ ವಿಭಾಗಗಳಿವೆ, ಒಂದು ಕ್ಯಾನ್ಸರ್ ವಾರ್ಡ್ ಹಾಗೂ MRI ಮತ್ತು CT ಸ್ಕ್ಯಾನ್ ಸೌಲಭ್ಯಗಳಿವೆ.

ಗ್ರಾಮೀಣಾಭಿವೃದ್ಧಿಯ ಕ್ಷೇತ್ರದಲ್ಲಿ ಈ ಕೆಳಗಿನ **ಹೊಸ ಯೋಜನೆಗಳು** ಉಲ್ಲೇಖಾರ್ಹ: ೧) **ರಾಂಚಿ ಮೊರಬಾದಿ** ಕೇಂದ್ರವು 'ಬೀಜ–ಗ್ರಾಮ–ಕಾರ್ಯಕ್ರಮ'ದ ಅಡಿಯಲ್ಲಿ ಉತ್ತಮ ಬೀಜಗಳನ್ನು ಉತ್ಪಾದಿಸಲು ೨೫ ಗ್ರಾಮಗಳಲ್ಲಿರುವ ೬೪೪ ಎಕರೆ ಪಾಳು ಜಮೀನಿನಲ್ಲಿ ಕೃಷಿಯನ್ನು ಆರಂಭಿಸಿ, ಅಲ್ಲಿನ ರೈತರಿಗೆ ತರಬೇತಿ ನೀಡಿತು. **ಸಾರಾಗಾಛಿ ಆಶ್ರಮ**ವು ೫ 'ಕ್ಷೇತ್ರ ಪ್ರಯೋಗ' (OFT)ಗಳನ್ನು 55 ಹೊಲಗಳಲ್ಲಿ ನಡೆಸಿತು, ಹಾಗೂ 4 ಸಂಶೋಧನ ನಿಬಂಧಗಳನ್ನು ಪ್ರಕಟಿಸಿತು. 690 ಜನರಿಗೆ ಪ್ರಾಣಿ ಆರೋಗ್ಯ ಕುರಿತು ತರಬೇತಿ ನೀಡಲಾಯಿತು.

ನಮ್ಮ ಹಲವು ಶಾಖಾಕೇಂದ್ರಗಳು **ಸ್ವಚ್ಛ ಭಾರತ ಅಭಿಯಾನ** ವನ್ನು ಮುಂದುವರಿಸಿದ್ದು, ಸ್ವಚ್ಛತಾ ಕಾರ್ಯಕ್ರಮ ಹಾಗೂ ಅರಿವು ನೀಡುವ ಅಭಿಯಾನವನ್ನು ನಡೆಸಿವೆ. ಈ ಕೆಳಗಿನ ಶಾಖಾ ಕೇಂದ್ರಗಳ ಕಾರ್ಯಗಳು ಉಲ್ಲೇಖನೀಯ: 1) **ಮಂಗಳೂರು** ಆಶ್ರಮವು

೧) ೨೬ ಸ್ವಚ್ಛತಾ ಕಾರ್ಯಕ್ರಮಗಳನ್ನು ಮಂಗಳೂರು ಸುತ್ತಮುತ್ತ ನಡೆಸಿದೆ. ೨) ಉಡುಪಿ ಜಿಲ್ಲೆಯ ೯೯ ಶಾಲೆಗಳಲ್ಲಿ ಸ್ವಚ್ಛತಾ ಅರಿವನ್ನು ಮ್ಯಾಜಿಕ್ ಪ್ರದರ್ಶನಗಳ ಮೂಲಕ ನೀಡಲಾಯಿತು. ೩) ೨೩೬ ಶಾಲೆಗಳಲ್ಲಿ ಸಾಂಸ್ಕೃತಿಕ ಸ್ಪರ್ಧೆಗಳು ಹಾಗೂ ಶಿಬಿರಗಳು ನಡೆದಿದ್ದು, ೨೩,೭೩೬ ವಿದ್ಯಾರ್ಥಿಗಳು ಇವುಗಳಲ್ಲಿ ಭಾಗವಹಿಸಿದ್ದಾರೆ. ಕೇಂದ್ರವು ೧೩೦ ಶಾಲೆಗಳಲ್ಲಿ ಸ್ವಚ್ಛತಾ ದಿನಾಚರಣೆ ಕಾರ್ಯಕ್ರಮ ನಡೆಸಲು ಮಾರ್ಗದರ್ಶನ ಮಾಡಿದ್ದು, ಇದರಲ್ಲಿ ೧೩,೦೦೦ ಮಂದಿ ಮಕ್ಕಳು ಭಾಗವಹಿಸಿದರು. 2) **ಸೇಲಂ** ಕೇಂದ್ರವು ಸೇಲಂ ಮುನ್ಸಿಪಲ್ ಕಾರ್ಪೊರೇಶನ್‌ನಲ್ಲಿ ಪೌರಕಾರ್ಮಿಕರಿಗಾಗಿ ವಿಶೇಷ ಕಾರ್ಯಕ್ರಮವನ್ನು ನಡೆಸಿತು.

ರಾಮಕೃಷ್ಣ ಮಠದ ಕೇಂದ್ರಗಳಲ್ಲಿ ನಡೆದ ಈ ಕೆಲವು ಬೆಳವಣಿಗೆಗಳು ಉಲ್ಲೇಖಾರ್ಹ: ೧) **ಕಾಲಡಿ** ಮಠವು ತನ್ನ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಹೊಸ ವಿಭಾಗವನ್ನು ಆರಂಭಿಸಿದೆ. ೨) **ಬರಿಶಾ** ಮಠವು ಅಲೋಪಥಿ ಆಸ್ಪತ್ರೆಯನ್ನು ಆರಂಭಿಸಿದೆ. ೩) **ಚೆನ್ನೈ** ಮಠವು ವಿವೇಕಾನಂದ ಇಲ್ಲಂನಲ್ಲಿ ಸ್ವಾಮೀಜಿ ಪರಿವ್ರಾಜಿಕ ದಿನಗಳನ್ನು ಕುರಿತ 4-D ವರ್ಚುವಲ್ ರಿಯಾಲಿಟಿ ಚಿತ್ರ ಪ್ರದರ್ಶನವನ್ನು ಆರಂಭಿಸಿದೆ. ೪) **ಕೊಯಿಲಾಂಡಿ** ಮಠವು ಬಹೂಪಯೋಗಿ ಹಾಲ್ ಅನ್ನು ನಿರ್ಮಿಸಿದೆ.

ರಾಮಕೃಷ್ಣ ಮಠ ಮತ್ತು ಮಿಷನ್ ಹಲವು ಸಂದರ್ಭಗಳಲ್ಲಿ ಅನೇಕ **ಪರಿಹಾರ ಹಾಗೂ ಪುನರ್ವಸತಿ**ಯ ಕಾರ್ಯಗಳನ್ನು ನಡೆಸಿವೆ. ಕೋವಿಡ್-೧೯ ಮಹಾಮಾರಿ, ಕೇರಳ-ಕರ್ನಾಟಕ-ಈಶಾನ್ಯ ರಾಜ್ಯಗಳಲ್ಲಿ ಹಾಗೂ ಇತರ ಪ್ರದೇಶಗಳಲ್ಲಿ ಉಂಟಾದ ನೆರೆಹಾವಳಿ; ಫನಿ, ವಾಯು, ಬುಲ್‌ಬುಲ್ ಮುಂತಾದ ಒಡಿಶಾ, ಗುಜರಾತ್, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಹಾನಿಯುಂಟುಮಾಡಿದ ಚಂಡಮಾರುತ ಇವೇ ಮೊದಲಾದ ಸಂದರ್ಭಗಳಲ್ಲಿ ನಡೆಸಿದ ಈ ಪರಿಹಾರ ಕಾರ್ಯಕ್ರಮಗಳಲ್ಲಿ ೩೮.೨೪ ಕೋಟಿ ರೂ. ವೆಚ್ಚವಾಗಿದ್ದು, ೮.೨೪ ಲಕ್ಷ ಜನರು ಇವುಗಳ ಪ್ರಯೋಜನ ಪಡೆದಿದ್ದಾರೆ.

ಈ ವರ್ಷಾವಧಿಯಲ್ಲಿ ಮಿಷನ್ ಮತ್ತು ಮಠವು **ಸಾಧಾರಣ ಸೇವಾ ಕಾರ್ಯಕ್ರಮ**ವನ್ನು ಬಡವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ನೀಡುವ ಮೂಲಕ, ಹಾಗೂ ವೃದ್ಧರಿಗೂ ರೋಗಿಗಳಿಗೂ ಸಂತ್ರಸ್ತರಿಗೂ ಧನಸಹಾಯ ಮಾಡುವ ಮೂಲಕ ನಡೆಸಿವೆ. ಇದಕ್ಕೆ ತಗುಲಿದ ವೆಚ್ಚ ೨೯.೪೨ ಕೋಟಿ ರೂ.

೧೦ ಆಸ್ಪತ್ರೆಗಳು, ೮೭ ಡಿಸ್ಪೆನ್ಸರಿಗಳು, ೩೯ ಮೊಬೈಲ್ ವಾಹನಗಳು ಹಾಗೂ ೯೮೫ ವೈದ್ಯಕೀಯ ಶಿಬಿರಗಳ ಮೂಲಕ ಮಿಷನ್ ೮೩.೧೧ ಲಕ್ಷ ಜನರಿಗೆ **ವೈದ್ಯಕೀಯ ಸೇವೆ**ಯನ್ನು ಮಾಡಿದೆ. ಇದಕ್ಕೆ ತಗುಲಿದ ವೆಚ್ಚ ೨೭೨.೩೧ ಕೋಟಿ.

ಮಿಷನ್ನಿನ ಶಿಕ್ಷಣ ಸಂಸ್ಥೆಗಳಲ್ಲಿ ನರ್ಸರಿಯಿಂದ ಆರಂಭಿಸಿ ವಿಶ್ವವಿದ್ಯಾಲಯ ಹಂತದ ವರೆಗಿನ ತರಗತಿಗಳಲ್ಲಿ ಸುಮಾರು ೨.೬೬ ಲಕ್ಷ ವಿದ್ಯಾರ್ಥಿಗಳು ಶಿಕ್ಷಣ ಪಡೆದಿದ್ದಾರೆ. ಇದರಲ್ಲಿ ಅನೌಪಚಾರಿಕ ವಿದ್ಯಾ ಸಂಸ್ಥೆಗಳು, ರಾತ್ರಿಶಾಲೆಗಳು, ತರಬೇತಿ ಕೇಂದ್ರಗಳು ಸೇರಿವೆ. **ಶೈಕ್ಷಣಿಕ ಕಾರ್ಯ**ಕ್ಕಾಗಿ ೩೯೬.೧೯ ಕೋಟಿ ರೂ. ವ್ಯಯವಾಗಿದೆ. ಮಿಷನ್ ಕೈಗೊಂಡ ಹತ್ತು ಹಲವು ಗ್ರಾಮೀಣ ಹಾಗೂ ಬುಡಕಟ್ಟು ಜನರ ಅಭಿವೃದ್ಧಿ ಕಾರ್ಯಗಳಲ್ಲಿ ಒಟ್ಟು ೧೩೧.೬೨ ಕೋಟಿ ರೂ. ವ್ಯಯವಾಗಿದ್ದು, ಇದರಿಂದ ೫.೭೩ ಲಕ್ಷ ಜನರು ಪ್ರಯೋಜನ ಪಡೆದಿದ್ದಾರೆ.

**ಸ್ವಾಮಿ ವಿವೇಕಾನಂದರು ಅಮೆರಿಕದ ಚಿಕಾಗೋದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ನೀಡಿದ ಭಾಷಣದ ೧೨೫ನೇ ವರ್ಷಾಚರಣೆ**ಯು ವರ್ಷವಿಡೀ ನಡೆದಿದ್ದು, ಅದರ ಪ್ರಯುಕ್ತ ಬೇಲೂರು ಮಠ ಪ್ರಧಾನಕೇಂದ್ರ ಹಾಗೂ ಇತರ ಶಾಖಾ ಕೇಂದ್ರಗಳು ವೈಭವಯುತವಾದ ಸಮಾರೋಪವನ್ನು ನಡೆಸಿವೆ. ೨೦೧೯ರ ಡಿಸೆಂಬರ್ ತಿಂಗಳಲ್ಲಿ **ಬೇಲೂರು ಮಠ**ದಲ್ಲಿ ರಾಮಕೃಷ್ಣ ಮಠ ಹಾಗೂ ಮಿಷನ್ನಿನ ವಿವಿಧ ಶೈಕ್ಷಣಿಕ ಸಂಸ್ಥೆಗಳ '**All India Alunini Meet**' ನಡೆಯಿತು. ಅಮೆರಿಕದ ಹಾಗೂ ಇತರ ದೇಶಗಳ ಕೆಲವು ಕೇಂದ್ರಗಳು ಕೂಡ ಸಾರ್ವಜನಿಕ ಸಭೆ, ಭಾಷಣ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿವೆ.

**ವಿದೇಶ**ಗಳಲ್ಲಿ ನಡೆದ ಈ ಕೆಲವು ಬೆಳವಣಿಗೆಗಳು ಉಲ್ಲೇಖಾರ್ಹ: ೧)ಬೇಲೂರು ಮಠ ಪ್ರಧಾನ ಕೇಂದ್ರದ ಚಾಲನೆಗೆ ಅನುಗುಣವಾಗಿ ಬ್ರಿಟನ್ನಿನ ಗ್ರೇಟ್ ಟೊರಿಂಗ್ಟನ್‌ನಲ್ಲಿ **ಸೋದರಿ ನಿವೇದಿತಾ** ಅವರ ಕಂಚಿನ ಪ್ರತಿಮೆಯನ್ನು ಅವರ ಕುಟುಂಬಕ್ಕೆ ಸೇರಿದ ಸಮಾಧಿ ಸ್ಥಳದಲ್ಲಿ ಸ್ಥಾಪಿಸಲಾಯಿತು. ೨) (ಬಾಂಗ್ಲಾದೇಶದ) **ಢಾಕಾ** ಕೇಂದ್ರದಲ್ಲಿ ನೂತನವಾಗಿ ನಿರ್ಮಿತವಾದ ವಿವೇಕಾನಂದ ಭವನವನ್ನು ಉದ್ಘಾಟಿಸಲಾಯಿತು.

ರಾಮಕೃಷ್ಣ ಮಿಷನ್ ಮತ್ತು ರಾಮಕೃಷ್ಣ ಮಿಷನ್ನಿನ ಸೇವಾಕಾರ್ಯಗಳನ್ನು ಮುಂದುವರೆಸಿಕೊಂಡು ಹೋಗುವಲ್ಲಿ ಅತ್ಯಂತ ಕಾಳಜಿಯಿಂದ ಸಹಕಾರ ನೀಡಿರುವ ನಮ್ಮ ಸದಸ್ಯರಿಗೂ, ಸ್ನೇಹಿತರಿಗೂ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಈ ಸಂದರ್ಭದಲ್ಲಿ ಸಮರ್ಪಿಸುತ್ತೇವೆ.

೦೭ ಮಾರ್ಚ್, ೨೦೨೧

(ಸ್ವಾಮಿ ಸುವೀರಾನಂದ)

ಪ್ರಧಾನ ಕಾರ್ಯದರ್ಶಿ, ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್

Managing Editor : Swami Muktidananda Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020